ಮಲ್ಲಿಕಾರ್ಜುನ, ಸುರಧೇನುಪುರ

ವಿದ್ಯೆಗೆ ಶಾಲೆಗಳಿವೆ. ಬುದ್ಧಿಗೆ?




ಅನುಭವಿಗಳ ಸಾಲುಗಳಿವೆ.

ಸಿಹಿಮೊಗೆ ರಮೇಶ್, ಮೈಸೂರು

ತಂದೆ ತಾಯಿಗೂ ನಮಸ್ಕರಿಸದವರು ಜನಪ್ರತಿನಿಧಿಗಳ ಕಾಲಿಗೆ ನಮಸ್ಕರಿಸಲು ಮುಗಿಬೀಳುವುದೇಕೆ?

‘ಕಾರ್ಯವಾಸಿ ಕತ್ತೆ ಕಾಲು ಕಟ್ಟು’ ಎಂದು ಅರಿತಿರುವುದರಿಂದ.

ಸಿ.ಕೆ. ಗಣಪ್ಪನವರ, ಮುಂಡರಗಿ

ಸ್ವಾಮಿಗಳ ಭಾಷಣಕ್ಕೂ, ರಾಜಕಾರಣಿಗಳ ಭಾಷಣಕ್ಕೂ ಏನು ವ್ಯತ್ಯಾಸ ಸರ್?

ಒಂದೇ ಅಕ್ಷರ ವ್ಯತ್ಯಾಸ – ಇವರದು ವಿಷಯಭರಿತ; ಅವರದು ವಿಷಭರಿತ.

ವಿ. ಹೇಮಂತಕುಮಾರ್, ಬೆಂಗಳೂರು

ನಾಚಿಕೊಂಡಾಗ ಹೆಣ್ಣಿನ ಕೆನ್ನೆ ಕೆಂಪಾಗುವುದೇಕೆ?



ಮನಸ್ಸು ‘ಹೂ’ ಎಂದಿರುವುದನ್ನು ಕೆನ್ನೆ ಗುಲಾಬಿಯಾಗಿ ತೋರುವುದಂತೆ.

ಎನ್. ವೈದೇಹಿ, ಮೈಸೂರು

ಮಾಧ್ಯಮಕ್ಕಾಗಿ ರಾಜಕೀಯವೋ, ರಾಜಕೀಯಕ್ಕಾಗಿ ಮಾಧ್ಯಮವೋ?

ಎಷ್ಟೋ ಮಾಧ್ಯಮಗಳು ರಾಜಕೀಯದ ತೋಳಗಳಿಗಾಗಿ ನರಿಗಳು ನಡೆಸುವ ಮುಖವಾಣಿಗಳು.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು

ಶಿಕ್ಷಣವೇ ಸಮಸ್ಯೆಯೋ, ಸಮಸ್ಯೆಗಳಿಗಾಗಿ ಶಿಕ್ಷಣವೋ?

ಈಗಂತೂ ಪಠ್ಯಕ್ರಮದ ಬಗ್ಗೆಯ ಸತ್ಯವೇ ಅತಿ ದೊಡ್ಡ ಸಮಸ್ಯೆ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ

ಇಂದು ಗಾಂಧೀಜಿ ನಮ್ಮೊಡನಿದ್ದರೆ ಏನಾಗುತ್ತಿತ್ತು?

ಓಟ, ನೋಟ, ಕೇಳ್ಮೆ ಹಾಳಾಗುವಷ್ಟು ವಯಸ್ಸಾಗುತ್ತಿತ್ತು.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಭಗವಂತ ಮನುಷ್ಯನಿಗೆ ಎಲ್ಲವನ್ನೂ ನೀಡಿ ನೆನಪಿನ ಶಕ್ತಿಯೊಂದನ್ನು ಕೊಡದಿದ್ದರೆ ಏನಾಗುತ್ತಿತ್ತು ಗುರುಗಳೆ?

ಆತ್ಮಸಾಕ್ಷಿಯೆಂಬ ದಿವ್ಯೌಷಧವೇ ಇಲ್ಲವಾಗುತ್ತಿತ್ತು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಜ್ಞಾನೋದಯವಾದರೆ ಸತ್ತು ಬದುಕುತ್ತಾರಂತೆ ಹೌದಾ ಸಾರ್?

‘ಈ ದಡ್ಡರೊಡನೆ ಇನ್ನೂ ಇರಬೇಕಲ್ಲ’ ಎಂದು ಬೇಸತ್ತು ಬದುಕುತ್ತಾರೆ.

ಪಿ. ಜಯವಂತ ಪೈ, ಕುಂದಾಪುರ

ಕರಾಟೆಗೂ, ತರಾಟೆಗೂ ವ್ಯತ್ಯಾಸವೇನು?

ಅದು ಹಾರುಹೋರಾಟ; ಇದು ಹಾರುಚೀರಾಟ.

ಅಂಚೆ ಸುಬ್ರಹ್ಮಣ್ಯ. ಕೊಪ್ಪ

ಹೆಚ್ಚಿನ ಶ್ವಾನಗಳು ಕಾರಿನ ಅಡಿ ಮಲಗುವುದೇಕೆ ರಾಮ್?

ಕುಡುಕ ಚಾಲಕರ, ಎಡವಿ ತುಳಿಯುವವರ ಭಯವಿಲ್ಲದೆ ನಿದ್ರಿಸಲು ಅದೇ ಸೇಫ್ ಪ್ಲೇಸ್.

ಅನಸೂಯ ಟಿ, ಕೇದಿಗೆಮನೆ

ದೇಶೋದ್ಧಾರ ಮಾಡಲು ರಾಜಕೀಯ ಅಖಾಡದ ಹೊರತಾಗಿ ಬೇರೆ ದಾರಿ ಇಲ್ಲವೆ?

ಇವೆ. ಆದರೆ ಆ ಎಲ್ಲ ದಾರಿಗಳ ಸಂಚಾರಕ್ಕೂ ರಾಜಕೀಯದ ಅಡ್ಡಗಾಲಿದೆ.

ಎಂ.ಎ. ಕುಮಾರ್, ಬೆಂಗಳೂರು

ಆತ್ಮದೊಳಗೆ ಪರಮಾತ್ಮ ಸೇರಿದಾಗ ಆಗುವ ಪರಿಣಾಮವೇನು?

ಅನೂಹ್ಯ ಅನುಭವಗಳ ಪರಿಣಾಮವಾಗಿ ತೊಡರುನಡೆ, ತೊದಲುನುಡಿ.

## ಬಹುಮಾನಿತ ಪ್ರಶ್ನೆ

ಬೂಕನಕೆರೆ ವಿಜೇಂದ್ರ, ಮೈಸೂರು

ರಾಜಕಾರಣಿಗಳೇಕೆ ಭಾಷಣ ಮಾಡುವಾಗ ಆಗಾಗ ತಲೆ ಕೆರೆದುಕೊಳ್ಳುವುದು?

ಇಂತಿಂಥದ್ದೇ ಹೇಳಬೇಕೆಂದು ಪಕ್ಷದವರು ತಲೆಗೆ ಹುಳ ಬಿಟ್ಟಿರುತ್ತಾರಲ್ಲ, ಅದರಿಂದಾದ ನವೆಯಂತೆ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ಒಂದು ಸಲದ ಉಪನಾಮದ ಹಾನಿಗೆ ರಾಹುಲರಿಗೆ ಶಿಕ್ಷೆ. ನಿತ್ಯ ನಾಮಕ್ಕೇ ಹಾನಿ ಮಾಡುತ್ತಿರುವವರಿಗೆ ಇಲ್ಲವೆ ಶಿಕ್ಷೆ?

ನಿತ್ಯ ನಡೆಯುವವರು ಎಡವಿದರೆ ನಗಣ್ಯ; ಶಿಖರದಲ್ಲಿರುವವರು ಜಾರಿದರೆ ಅಪಾಯ ನಿಶ್ಚಿತ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಹಲವೆಡೆ 40, 60, 80 ಅಡಿ ಎನ್ನುವ ರಸ್ತೆಗಳಿವೆ. ಗೊಂದಲವಾಗುತ್ತೆ. ಗಾಂಧಿ ಕುಟುಂಬದವರ ಹೆಸರುಗಳಿಡಬಹುದಲ್ಲವೆ?

ಅದರಲ್ಲೂ ಕೆಲವು ಹೆಸರುಗಳು ಅಡ್ಡರಸ್ತೆಗಳಿಗೆ ಮಾತ್ರ ಸೂಕ್ತವಂತೆ.

ಜಗದೀಶ ಬಿ. ಹೊಸೂರು, ಮೈಸೂರು

ಹಸಿದವನಿಗೆ ಅನ್ನವಿಕ್ಕುವುದು ಪುಣ್ಯದ ಕೆಲಸ. ಹಸಿಯದವನಿಗೆ ಅಕ್ಕಿ ನೀಡುವುದು?



ಕೊನೆಯಲ್ಲಿ ಬಾಯಿಗೆ ಹಾಕಲು ಇಟ್ಟುಕೊಳ್ಳಲೆಂಬ ಮುಂದಾಲೋಚನೆ.

ಸುಮನಾ, ತೆಲಂಗಾಣ

ಮದ್ಯಮಾರಾಟ ಬಂದ್ ಅಂತ ಮೂರು ದಿನ ಮೊದ್ಲೇ ಖರೀದ್ಸೋ ಬುದ್ವಂತ್ಕೇಗೆ ಏನಂತೀರಿ?

ಇಳಿಜಾರಿಗೆ ಇರುವ ಆಕರ್ಷಣೆ ಸಮತಟ್ಟಿಗೆ ಇರುವುದಿಲ್ಲ.

ರತ್ನಜ, ಮೈಸೂರು

ಸಿನಿಮಾ, ಸೀರಿಯಲ್‌ಗಳಲ್ಲಿರುವಂತೆ ನಿಜ ಜೀವನದಲ್ಲಿ ಹಿನ್ನೆಲೆ ಸಂಗೀತ ಇರುವುದಿಲ್ಲವೇಕೆ?

ನೀವೇ ಪುಣ್ಯವಂತರು. ನಮ್ಮಲ್ಲಿ ಪಿಟೀಲು ಕುಯ್ಯುವ, ತೌಡು ಕುಟ್ಟುವ ಹಿನ್ನೆಲೆ ಹೇರಳವಾಗಿ ಇದೆ.

■ ರಾಮ್